## ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ (ಪಿಎಂಜೆಜೆಬಿವೈ) ಸಂಬಂಧಿಸಿದಂತೆ ಪ್ರಶ್ನೆಗಳು

**ಪ್ರಶ್ನೆ 1 : ಈ ಯೋಜನೆಯ ಸ್ವರೂಪವೇನು?**

ಈ ಯೋಜನೆಯು ಒಂದು ವರ್ಷ ಅವಧಿಯ ಜೀವ ವಿಮಾ ಯೋಜನೆಯಾಗಿರುತ್ತದೆ. ಪ್ರತಿ ವರ್ಷವೂ ನವೀಕಣಗೊಳಿಸಬಹುದಾಗಿದ್ದು, ಯಾವುದೇ ಕಾರಣದಿಂದಲೂ ಸಂಭವಿಸಬಹುದಾದ ಮರಣಕ್ಕೆ ಸಂಬಂಧಿಸಿದಂತೆ ಈ ಯೋಜನೆಯು ಅನ್ವಯಿಸುತ್ತದೆ.

**ಪ್ರಶ್ನೆ 2 : ಈ ಯೋಜನೆಯ ಅಡಿಯಲ್ಲಿ ಬರಬಹುದಾದ ಅನುಕೂಲತೆಗಳೇನು ಮತ್ತು ಪಾವತಿ ಮಾಡಬೇಕಾದ ಪ್ರೀಮಿಯಂ ಮೊತ್ತವೇನು?**

ವಿಮಾದಾರನು ಯಾವುದೇ ಕಾರಣದಿಂದ ಮೃತಪಟ್ಟಲ್ಲಿ ರೂ.2 ಲಕ್ಷಗಳನ್ನು ಪಾವತಿ ಮಾಡಲಾಗುವುದು. ವಾರ್ಷಿಕವಾಗಿ ರೂ.330/- ಗಳ ಪ್ರೀಮಿಯಮ್ ಹಣವನ್ನು ಪಾವತಿ ಮಾಡಬೇಕಾಗಿರುತ್ತದೆ.

**ಪ್ರಶ್ನೆ 3 : ಪ್ರೀಮಿಯಂ ಹಣವನ್ನು ಪಾವತಿ ಮಾಡುವ ವಿಧಾನವೇನು?**

ನೋಂದಣಿ ಮಾಡುವ ಸಮಯದಲ್ಲಿ ನೀಡಿರುವ ಒಪ್ಪಿಗೆಯ ಆಧಾರದಲ್ಲಿ ಆಟೋ ಡೆಬಿಟ್ ವ್ಯವಸ್ಥೆಯಲ್ಲಿ ಒಂದೇ ಕಂತಿನಲ್ಲಿ ಖಾತೆದಾರರ ಬ್ಯಾಂಕ್ ಖಾತೆಯಿಂದ ಕಡಿತಗೊಳಿಸಲಾಗುವುದು. ಸದರಿ ಯೋಜನೆಯು ಜಾರಿಯಲ್ಲಿರುವವರೆಗೆ ಯೋಜನೆಯ ಅನುಭವದ ಮೇಲೆ ಅಗತ್ಯ ಬದಲಾವಣೆಗಳನ್ನು ತರುವದನ್ನು ಒಳಗೊಂಡು ಆಟೋ ಡೆಬಿಟ್ ಆಧಾರದಲ್ಲಿ ಪ್ರತಿ ವರ್ಷ ಪಾವತಿ ಮಾಡುವಂತೆ ಒಂದು ಬಾರಿಯ ಹುಕುಂ ನೀಡುವ ಅವಕಾಶ ಸದಸ್ಯರಿಗಿದೆ

**ಪ್ರಶ್ನೆ 4 : ಯಾರು ಈ ಯೋಜನೆಯನ್ನು ಜಾರಿಗೆ ತರುತ್ತಾರೆ / ಪರಿಚಯಿಸುವವರು ಯಾರು?**

ಸದರಿ ಯೋಜನೆಯು ಎಲ್.ಐ.ಸಿ. ಮತ್ತು ಇತರೆ ಯಾವುದೇ ವಿಮಾ ಕಂಪನಿಯ ಮುಖಾಂತರ ಪರಿಚಯಿಸಿದ್ದು/ಜಾರಿಗೆ ತಂದಿರುತ್ತಾರೆ. ಎಲ್.ಐ.ಸಿ. ಮತ್ತು ಇತರೆ ಯಾವುದೇ ವಿಮಾ ಕಂಪನಿಯ ಯೋಜನೆಯನ್ನು ಪರಿಚಯಿಸಲು ಇಚ್ಛಿಸಿದಲ್ಲಿ, ಇತರ ಬ್ಯಾಂಕುಗಳ ಜೊತೆಗೂಡಿ ಅಗತ್ಯವಾದ ಅನುಮತಿಯನ್ನು ಪಡೆದು ಜಾರಿಗೆ ತರುವುದು. ಇದರಲ್ಲಿ ಪಾಲ್ಗೊಳ್ಳುವ ಬ್ಯಾಂಕುಗಳು ತಮ್ಮ ಇಚ್ಛಾನುಸಾರ ಯಾವುದೇ ವಿಮಾ ಕಂಪನಿಯನ್ನು ತಮ್ಮ ಗ್ರಾಹಕರಿಗೆ ಈ ಯೋಜನೆಯನ್ನು ಒದಗಿಸಲು ನೇಮಕ ಮಾಡಿಕೊಳ್ಳಬಹುದು.

**ಪ್ರಶ್ನೆ 5 : ಈ ಯೋಜನೆಗೆ ಯಾರು ಅರ್ಹರಾಗುತ್ತಾರೆ?**

18 ರಿಂದ 50 ವರ್ಷ ವಯಸ್ಸಿನ ಯಾವುದೇ ಪ್ರತ್ಯೇಕ (ಜಂಟಿ ಅಥವಾ ವೈಯಕ್ತಿಕ) ಖಾತೆದಾರರು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಒಂದು ವೇಳೆ ಯಾವುದೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚಿನ ಬ್ಯಾಂಕುಗಳಲ್ಲಿ ಬಹು ಖಾತೆಗಳನ್ನು ಹೊಂದಿದ್ದಲ್ಲಿ, ಅಂತಹವರು ಯಾವುದಾದರೂ ಒಂದು ಬ್ಯಾಂಕಿನಲ್ಲಿ ಒಂದು ಖಾತೆಯ ಮೂಲಕ ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.

**ಪ್ರಶ್ನೆ 6 : ನೋಂದಣಿಯ ಅವಧಿ ಮತ್ತು ಮಾದರಿ?**

ಪ್ರಾರಂಭದಲ್ಲಿ ಈ ಯೋಜನೆಯನ್ನು ಪ್ರಾರಂಭಿಸುವಾಗ ಅವಧಿಯು 1ನೇ ಜೂನ್ 2015 ರಿಂದ 31ನೇ ಮೇ 2016 ರವರೆಗೆ ಆಗಿದ್ದು, ಫಲಾನುಭವಿಗಳು ತಮ್ಮ ಆಟೋ ಡೆಬಿಟ್‌ಗಾಗಿ ದಿನಾಂಕ: 31ನೇ ಮೇ 2015 ರವರೆಗೆ ನೊಂದಾಯಿಸಬಹುದಾಗಿದೆ, ಈ ಕಾಲಾವಕಾಶವನ್ನು 31ನೇ ಆಗಸ್ಟ್ 2015 ರವರೆಗೂ ವಿಸ್ತರಿಸಲಾಗಿದೆ . ಈ ಅವಧಿಯು ಮುಗಿದ ನಂತರದ ತಡವಾದ ನವಿಕಾರಣವು ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಪಾವತಿ ಮಾಡಿ, ತಮ್ಮ ಆರೋಗ್ಯದ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಸಾಧ್ಯವಾಗುವುದು.

ಮೊದಲ ವರ್ಷದ ನಂತರವೂ ಈ ಯೋಜನೆಯಲ್ಲಿ ಮುಂದುವರೆಯಲು ಇಚ್ಛಿಸುವ ಫಲಾನುಭವಿಗಳು ಆಯಾ ವರ್ಷದ ಮೇ 31ರ ಒಳಗಾಗಿ ಆಟೋ ಡೆಬಿಟ್‌ಗಾಗಿ ಸಮ್ಮತಿ ನೀಡುವುದು. ತಡವಾದ ನವೀಕರಣದ ಸಂದರ್ಭದಲ್ಲಿ ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಪಾವತಿ ಮಾಡಿ, ತಮ್ಮ ಆರೋಗ್ಯದ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಸಾಧ್ಯವಾಗುವುದು.

**ಪ್ರಶ್ನೆ 7 : ಒಂದು ವೇಳೆ ಪ್ರಾರಂಭಿಕ ವರ್ಷದಲ್ಲಿ ನೋಂದಣಿ ಮಾಡಿಕೊಳ್ಳಲು ತಪ್ಪಿದ ಫಲಾನುಭವಿಗಳು ಮುಂದಿನ ವರ್ಷಕ್ಕೆ ಅರ್ಹರಾಗುತ್ತಾರೆಯೇ?**

ಹೌದು. ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಪಾವತಿ ಮಾಡಿ, ತಮ್ಮ ಆರೋಗ್ಯದ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಸಾಧ್ಯವಾಗುವುದು ಮತ್ತು ಮುಂದಿನ ವರ್ಷಗಳಲ್ಲಿಯೂ ಸಹ ಹೊಸದಾಗಿ ಸೇರ್ಪಡೆ ಬಯಸುವವರು ಅದರಂತೆಯೇ ನೋಂದಣಿ ಮಾಡಿಕೊಳ್ಳಬಹುದು .

**ಪ್ರಶ್ನೆ : 8 : ಈ ಯೋಜನೆಯಿಂದ ಹೊರಬಂದಿರುವ ಫಲಾನುಭವಿಗಳು ಪುನಃ ಸೇರಿಕೊಳ್ಳಬಹುದೇ?**

ಈ ಯೋಜನೆಯಿಂದ ಯಾವುದೇ ಸಂದರ್ಭದಲ್ಲಿ ಹೊರಬಂದಿರುವ ಯಾವುದೇ ಫಲಾನುಭವಿಯೂ ಸಹ ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಪಾವತಿ ಮಾಡಿ, ತಮ್ಮ ಆರೋಗ್ಯದ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಮರುಸೇರ್ಪಡೆ ಸಾಧ್ಯವಾಗುವುದು.

**ಪ್ರಶ್ನೆ 9 : ಈ ಯೋಜನೆಯಲ್ಲಿ ಯಾರು ಮಾಸ್ಟರ್ ಪಾಲಿಸಿದಾರರಾಗುತ್ತಾರೆ.**

ಈ ಯೋಜನೆಯಲ್ಲಿ ಪಾಲ್ಗೊಳ್ಳುವ ಬ್ಯಾಂಕುಗಳು **ಮಾಸ್ಟರ್** ಪಾಲಿಸಿದಾರರಾಗಿರುತ್ತಾರೆ. ಎಲ್‌ಐಸಿ / ಯಾವುದೇ ಆಯ್ಕೆಯಾದ ವಿಮಾ ಕಂಪನಿಯವರು ಪಾಲ್ಗೊಳ್ಳುವ ಬ್ಯಾಂಕಿನ ಜೊತೆ ಚರ್ಚಿಸಿ ಸರಳ ಮತ್ತು ಚಂದಾದಾರ ಸ್ನೇಹಿ ಆಡಳಿತ ಮತ್ತು ಕ್ಲೇಮ್ ಸೆಟಲ್‌ಮೆಂಟ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ .

**ಪ್ರಶ್ನೆ 10 : ಯಾವ ಸಂದರ್ಭದಲ್ಲಿ ಸದಸ್ಯರ ವಿಮೆಯು ಮುಕ್ತಾಯಗೊಳ್ಳುತ್ತದೆ.**

ಈ ಕೆಳಕಂಡ ಯಾವುದಾದರೂ ಒಂದು ಸಂದರ್ಭದಲ್ಲಿ ಸದಸ್ಯರ ವಿಮಾ ಯೋಜನೆಯು ಮುಕ್ತಾಯಗೊಳ್ಳುತ್ತದೆ.

(1) 55 ವರ್ಷ ವಯಸ್ಸಾದ ನಂತರ (ಹತ್ತಿರದ ಜನ್ಮ ದಿನಾಂಕದಂದು), ಸದರಿ ದಿನಾಂಕದವರೆಗೂ ವಾರ್ಷಿಕ ನವೀಕರಣವಾಗಿದ್ದಲ್ಲಿ (50 ವರ್ಷಗಳ ನಂತರ ನೋಂದಣಿ ಮಾಡಲು ಸಾಧ್ಯವಿರುವುದಿಲ್ಲ)

(2) ಬ್ಯಾಂಕಿನ ಖಾತೆಯನ್ನು ಮುಕ್ತಾಯಗೊಳಿಸಿದಲ್ಲಿ ಅಥವಾ ವಿಮೆಯನ್ನು ಜಾರಿಯಲ್ಲಿಡಲು ಅವಶ್ಯಕವಾದ ಮೊತ್ತ ಇಲ್ಲದಿದ್ದಲ್ಲಿ.

(3) ಒಂದು ವೇಳೆ ಫಲಾನುಭವಿಯು ಒಂದಕ್ಕಿಂತ ಹೆಚ್ಚಿನ ಖಾತೆಯನ್ನು ಹೊಂದಿದ್ದು, ಆಕಸ್ಮಿಕವಾಗಿ ಎಲ್. ಐ.ಸಿ./ಇನ್ಸುರೆನ್ಸ್ ಕಂಪನಿಗಳು ಪ್ರಿಮಿಯಮ್ ಮೊತ್ತ ಪಡೆದಿದ್ದರೆ ವಿಮೆಯ ಮೊತ್ತವು ರೂ.2 ಲಕ್ಷಕ್ಕೆ ಸೀಮಿತವಾಗಿರುತ್ತದೆ ಮತ್ತು ಸದರಿ ಪ್ರೀಮಿಯಂ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಪ್ರಶ್ನೆ: 11: ಬ್ಯಾಂಕ್ ಮತ್ತು ವಿಮಾ ಕಂಪನಿಯ ಪಾತ್ರವೇನು?**

(1) ಸದರಿ ಯೋಜನೆಯು ಎಲ್ಐಸಿ ಅಥವಾ ಇತರೆ ವಿಮಾ ಕಂಪನಿಯವರು ಇತರೆ ಯಾವುದೇ ಬ್ಯಾಂಕ್ / ಬ್ಯಾಂಕುಗಳ ಜೊತೆ ಪಾಲುಗಾರಿಕೆಯೊಂದಿಗೆ ಜಾರಿಗೆ ತರುವುದು.

(2) ಸದರಿ ಯೋಜನೆಯಲ್ಲಿ ಭಾಗವಹಿಸುವ ಯಾವುದೇ ಬ್ಯಾಂಕು ಖಾತೆದಾರರಿಂದ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ಖಾತೆದಾರರ ಇಚ್ಚೆಯ ಮೇರೆಗೆ ,ನಿಗದಿತ ಪಾವತಿ ದಿನಾಂಕದೊಳಗೆ ಆಟೋ ಡೆಬಿಟ್ ಆಧಾರದಲ್ಲಿ ಸಂಗ್ರಹ ಮಾಡಿ ಸದರಿ ಮೊತ್ತವನ್ನು ಎಲ್ಐಸಿ ಗೆ ವರ್ಗಾವಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತದೆ

(3) ನೊಂದಣಿ ಅರ್ಜಿ / ಆಟೋ ಡೆಬಿಟ್ ಅಧಿಕಾರ ಪತ್ರ / ಒಪ್ಪಿಗೆ ಮತ್ತು ಘೋಷಣೆ ಪತ್ರ ಇವುಗಳನ್ನು ನಿಗಧಿತ ನಮೂನೆಯಲ್ಲಿ ಪಡೆದುಕೊಂಡು ತಮ್ಮಲ್ಲಿ ಇಟ್ಟುಕೊಳ್ಳುವುದು ಪಾಲ್ಗೊಳ್ಳುವ ಬ್ಯಾಂಕಿನ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಕ್ಲೈಮ್ ಇದ್ದಲ್ಲಿ ಎಲ್ಐಸಿ / ವಿಮಾ ಕಂಪನಿಯವರು ಇವುಗಳನ್ನು ಪಡೆಯಲು ಕೇಳಬಹುದು . ಎಲ್ಐಸಿ / ವಿಮಾ ಕಂಪನಿಯವರು ಈ ಎಲ್ಲಾ ದಾಖಲಾತಿಗಳನ್ನು ಯಾವುದೇ ಸಮಯದಲ್ಲಾದರೂ ಪಡೆದುಕೊಳ್ಳುವ ಹಕ್ಕು ಹೊಂದಿರುತ್ತಾರೆ.

**ಪ್ರಶ್ನೆ 12 : ಪ್ರೀಮಿಯಂ ಅನ್ನು ಯಾವ ರೀತಿ ಪರಿಗಣಿಸಲಾಗುತ್ತದೆ?**

(1) ವಿಮಾ ಪ್ರೀಮಿಯಂ ಎಲ್ಐಸಿ / ಇತರೆ ವಿಮಾ ಕಂಪನಿಗಳಿಗೆ : ಪ್ರತಿ ಸದಸ್ಯರಿಗೆ ವಾರ್ಷಿಕ ರೂ.289/-

(2) ಬಿಸಿ/ಮೈಕ್ರೋ/ಕಾರ್ಪೊರೇಟ್./ಏಜೆಂಟ್ ರವರ ಖರ್ಚುಗಳನ್ನು ಭರಿಸಲು : ಪ್ರತಿ ಸದಸ್ಯರಿಗೆ ವಾರ್ಷಿಕ ರೂ.30/-

(3) ಬ್ಯಾಂಕಿಗೆ ಆಡಳಿತಾತ್ಮಕ ವೆಚ್ಚ ಭರಿಸಲು ಪ್ರತಿ ಸದಸ್ಯರಿಗೆ ವಾರ್ಷಿಕ ರೂ.11/- .

**ಪ್ರಶ್ನೆ 13 : ಈ ಯೋಜನೆಯು ಫಲಾನುಭವಿಯ ಇತರೆ ಯಾವುದೇ ವಿಮಾ ಯೋಜನೆಯ ಜೊತೆಗೆ ಹೆಚ್ಚುವರಿಯಾಗಿರುತ್ತದೆಯೇ?**
ಹೌದು.

**ಪ್ರಶ್ನೆ 14 : ಎಲ್ಲಾ ಜಂಟಿ ಖಾತೆದಾರರು ಈ ಯೋಜನೆಯಲ್ಲಿ ಸದರಿ ಖಾತೆಯ ಮುಖಾಂತರ ನೋಂದಣಿ ಮಾಡಿಕೊಳ್ಳಬಹುದೇ?**

ಜಂಟಿ ಖಾತೆಯನ್ನು ಹೊಂದಿರುವ ಎಲ್ಲಾ ಖಾತೆದಾರರೂ ಸಹ ಈ ಯೋಜನೆಯಲ್ಲಿ ಸದಸ್ಯರಾಗಲು ಅರ್ಹತೆಗಳನ್ನು ಪೂರೈಸಿದ್ದರೆ ಸದಸ್ಯರಾಗಬಹುದು. ಆದರೆ ಪ್ರತಿಯೊಬ್ಬ ಸದಸ್ಯರೂ ಸಹ ವಾರ್ಷಿಕ ರೂ.330/- ಗಳ ಪ್ರೀಮಿಯಂ ಹಣವನ್ನು ಪಾವತಿ ಮಾಡುವುದು.

**ಪ್ರಶ್ನೆ: 15 : ಎನ್‌ಆರ್‌ಐ ಗಳು ಸದರಿ ಪಿಎಂಜೆಜೆಬಿವೈ ಯೋಜನೆಯ ವ್ಯಾಪ್ತಿಗೆ ಬರುತ್ತಾರೆಯೇ?**

ಭಾರತದಲ್ಲಿ ಶಾಖೆಯನ್ನು ಹೊಂದಿರುವ ಯಾವುದೇ ಬ್ಯಾಂಕಿನಲ್ಲಿ ಅರ್ಹ ಖಾತೆಯನ್ನು ಹೊಂದಿರುವ ಎನ್‌ಆರ್‌ಐ ಗಳು ಪಿಎಂಜೆಜೆಬಿವೈ ಯೋಜನೆಗೆ ಅರ್ಹರಾಗುತ್ತಾರೆ ಮತ್ತು ಈ ಯೋಜನೆಯ ನಿಯಮ ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದು. ಆದರೆ, ಕ್ಲೇಮುಗಳ ವಿಷಯ ಬಂದಲ್ಲಿ, ಎಲ್ಲಾ ಕ್ಲೇಮು ಸೌಲಭ್ಯಗಳನ್ನು ಫಲಾನುಭವಿ/ನಾಮನಿರ್ದೇಶಿತರಿಗೆ ಭಾರತೀಯ ರೂಪಾಯಿಗಳಲ್ಲಿ ಪಾವತಿ ಮಾಡಲಾಗುವುದು.

**ಪ್ರಶ್ನೆ 16 : ಯಾವ ಬ್ಯಾಂಕ್ ಖಾತೆಗಳು ಪಿಎಂಜೆಜೆಬಿವೈ ಗೆ ಅರ್ಹರಾಗುತ್ತವೆ?**

ಸಂಸ್ಥೆಯ ಹೆಸರಿನಲ್ಲಿ ಖಾತೆಯನ್ನು ಹೊಂದಿರುವ ಖಾತೆದಾರರನ್ನು ಬಿಟ್ಟು ಎಲ್ಲಾ ಬ್ಯಾಂಕಿನ ಖಾತೆದಾರರು ಪಿಎಂಜೆ ಜೆ ಬಿಬೈ ಯೋಜನೆಗೆ ಅರ್ಹರಾಗಿರುತ್ತಾರೆ.

**ಪ್ರಶ್ನೆ 17 : ಪಿಎಂಜೆಜೆಬಿವೈ ಯೋಜನೆಯಲ್ಲಿ ನೈಸರ್ಗಿಕ ವಿಕೋಪಗಳಾದ ಪ್ರವಾಹ, ಭೂಕಂಪ ಮತ್ತಿತರ ವಿಕೋಪಗಳಿಂದ ಉಂಟಾಗಬಹುದಾದ ಸಾವು, ಅಂಗವೈಕಲ್ಯವು ಒಳಗೊಳ್ಳುತ್ತದೆಯೇ? ಕೊಲೆ ಅಥವಾ ಆತ್ಮಹತ್ಯೆಯ ಪ್ರಕರಣದಲ್ಲಿ ಯಾವ ರೀತಿ ಅನುಸರಿಸಲಾಗುತ್ತದೆ?**

ಈ ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲಿಯೂ ಸಂಭವಿಸಬಹುದಾದ ಮೃತ್ಯು ಈ ಯೋಜನೆಯಲ್ಲಿ ಒಳಗೊಳ್ಳುತ್ತದೆ.

**ಪ್ರಶ್ನೆ 18 : ಪಿಎಂಜೆಜೆವೈ ಪಾಲಿಸಿಗಳು ವಿದೇಶಿ ವಿಮಾ ಕಂಪನಿಗಳ ಜೊತೆಯಲ್ಲಿ ಸೇರಿ ಸೇವೆಯನ್ನು ಒದಗಿಸುತ್ತವೆಯೇ?**

ಯಾವುದೇ ವಿದೇಶಿ ವಿಮಾ ಕಂಪನಿಗಳು ಭಾರತದಲ್ಲಿ ನೇರವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ವಿಮಾ ಕಾಯ್ದೆ ಮತ್ತು ಐಆರ್‌ಡಿಎ ನಿಯಮಾವಳಿಗಳ ಪ್ರಕಾರ ಕೆಲವು ವಿಮಾ ಕಂಪನಿಗಳು ಇತರೆ ಕಂಪನಿಗಳ ಜೊತೆಯಲ್ಲಿ ಸಹಭಾಗಿತ್ವದಲ್ಲಿ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ಅವರ ಪಾಲು ಶೇ.49%ಕ್ಕೆ ಸೀಮಿತವಾಗಿರುತ್ತದೆ.

**ಪ್ರಶ್ನೆ 19 : ಸದರಿ ಪಿಎಂಜೆಜೆಬಿವೈ ಯೋಜನೆಯಲ್ಲಿ ವಿಮಾದಾರರು ಮೃತಪಟ್ಟಲ್ಲಿ ಮಾತ್ರ ಅವರ ನಾಮಿನಿಯವರಿಗೆ ವಿಮಾ ಸೌಲಭ್ಯವನ್ನು ನೀಡಲಾಗುವುದು. ಬೇರೆ ಇತರೆ ವಿಮಾ ಪಾಲಿಸಿಗಳಲ್ಲಿ ಇದ್ದಂತೆ ಈ ಪಾಲಿಸಿಯಲ್ಲಿ ಸರಂಡರ್ ಮೊತ್ತ ಅಥವಾ ಮೆಚ್ಯೂರಿಟಿ ಅವಧಿ ಇರುವುದಿಲ್ಲವೇಕೆ?**

ಪಿಎಂಜೆಜೆಬಿವೈ ಯೋಜನೆಯು ಕೇವಲ ಮರಣಕ್ಕೆ ಸಂಬಂಧಪಟ್ಟದ್ದಾಗಿದ್ದು ಅದರ ಫಲವು ನಾಮಿನಿಯವರಿಗೆ ಮಾತ್ರ ಸೇರುತ್ತದೆ. ಪಿಎಂಜೆಜೆಬಿವೈ ಯೋಜನೆಯು ವಿಮಾ ಪಾಲಿಸಿಯಾಗಿದ್ದು, ಇದು ಯಾವುದೇ ರೀತಿಯ ಠೇವಣಿಯಾಗಿರುವುದಿಲ್ಲ. ಆದ್ದರಿಂದ ಬೇರೆ ಯಾವುದೇ ಪಾಲಿಸಿಗೆ ಹೋಲಿಸಿದ್ದಲ್ಲಿ ಇದರಲ್ಲಿ ಬರುವ ಮೊತ್ತವೂ ಸಹ ಕಡಿಮೆಯಾಗಿರುತ್ತದೆ. ಸದರಿ ಯೋಜನೆಯು ಆರ್ಥಿಕವಾಗಿ ಹಿಂದುಳಿದ ವರ್ಗದವರ ಅನುಕೂಲಕ್ಕಾಗಿ ಮಾಡಲಾಗಿರುತ್ತದೆ. ಉದ್ದೇಶವೇನೆಂದರೆ, ಕಡಿಮೆ ಪ್ರೀಮಿಯಂ ಅನ್ನು ನಿಗಧಿಪಡಿಸುವುದು.

**ಪ್ರಶ್ನೆ 20 : ಪಿಎಂಜೆಜೆಬಿವೈ ಯೋಜನೆಯು ಅತಿ ದೊಡ್ಡಮಟ್ಟದಲ್ಲಿ ಪ್ರಚುರಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟ ಮಾಡಿ ಇದರಿಂದ ಲಾಭವನ್ನು ಮಾಡಿಕೊಂಡು ವಿದೇಶಿ ಕಂಪನಿಗಳ ಜೊತೆಯಲ್ಲಿ ಜಂಟಿಯಾಗಿ ಕಾರ್ಯ ನಿರ್ವಹಿಸುವ ಉದ್ದೇಶವೇ?**

ಕೇವಲ ಭಾರತೀಯ ಕಂಪನಿಗಳು ಮಾತ್ರ ವಿಮಾ ಕಾಯ್ದೆಯಲ್ಲಿ ತಿಳಿಸಿರುವಂತೆ ಭಾರತದಲ್ಲಿ ಕಾರ್ಯ ನಿರ್ವಹಿಸಬಹುದು. ಎಲ್ಲಾ ವಿಮಾ ಕಂಪನಿಗಳೂ ಸಹ 49% ಸಹಭಾಗಿತ್ವ ಹೊಂದಿರುವ ವಿದೇಶಿ ಕಂಪನಿಗಳೂ ಸಹ ಭಾರತದಲ್ಲಿ ಮಾತ್ರ ವ್ಯವಹಾರ ಮಾಡಲು ಅವಕಾಶವಿದೆಯೇ ಹೊರತು ಹೊರದೇಶದಲ್ಲಿ ಅಲ್ಲ. ಪಿಎಂಜೆಜೆಬಿವೈ ಯೋಜನೆಯಲ್ಲಿ ಪಡೆದುಕೊಳ್ಳಲಾಗುವ ಪ್ರೀಮಿಯಂ ಮೊತ್ತವನ್ನು ಎಲ್ಲ ನಷ್ಟವುಂಟು ಮಾಡುವ ಅಂಶಗಳು ,ಪ್ರಚಲಿತ ಸಾವಿನ ಪ್ರಮಾಣ ಮತ್ತು ಪ್ರತಿಕೂಲ ಆಯ್ಕೆಗಳನ್ನು ವಾಸ್ತವಿಕವಾಗಿ ಲೆಕ್ಕಾಚಾರದೊಂದಿಗೆ ನಿಗದಿಗೊಳಿಸಲಾಗಿರುತ್ತದೆ.ಆದ್ದರಿಂದ ಹೆಚ್ಚಿನ ಲಾಭಾಂಶವನ್ನು ಕ್ರೋಢೀಕರಿಸಲು ಈ ಯೋಜನೆಯಲ್ಲಿ ಅವಕಾಶವಿಲ್ಲ.

**ಪ್ರಶ್ನೆ 21 : ಎಲ್ಐಸಿ ಕಂಪನಿಯು ಸರ್ಕಾರದ ಸಂಸ್ಥೆಯಾಗಿದ್ದು, ಪಿಎಂಜೆಜೆಬಿವೈ ಯೋಜನೆಯ ಇದರ ಜೊತೆಯಲ್ಲಿ ಕಾರ್ಯ ನಿರ್ವಹಿಸುವುದಲ್ಲದೆ ಇತರೆ ವಿದೇಶಿ ಕಂಪನಿಗಳ ಜೊತೆಯಲ್ಲಿ ಸಹಭಾಗಿತ್ವವನ್ನು ಏಕೆ ಪಡೆದುಕೊಳ್ಳಬೇಕು?**

ಭಾರತದಲ್ಲಿ 24 ಜೀವ ವಿಮಾ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಇವರುಗಳು ಭಾರತದಲ್ಲಿ ವ್ಯವಹಾರ ನಡೆಸಲು ಐಆರ್‌ಡಿಎಐ ನಿಂದ ಅನುಮೋದನೆ ಪಡೆದುಕೊಂಡಿರುತ್ತಾರೆ. ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವಲ್ಲಿ ತಮ್ಮಲ್ಲಿ ಪೈಪೋಟಿ ನಡೆಸುವ ಸಲುವಾಗಿ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಎಲ್ಲಾ ಅನುಮತಿಯನ್ನು ನೀಡಲಾಗಿದೆ. ಅಲ್ಲದೆ ಅವುಗಳೆಲ್ಲವೂ ಭಾರತೀಯ ವಿಮಾ ಕಂಪನಿಗಳಾಗಿರುತ್ತವೆ. ಯಾವುದಾದರೂ ವಿದೇಶಿ ಕಂಪನಿಗಳು ಅವರ ಜೊತೆಯಲ್ಲಿ ಸಹಭಾಗಿತ್ವವನ್ನು ಹೊಂದಿದ್ದಲ್ಲಿ ಕೇವಲ 49% ಮಾತ್ರ. ಆದರೂ ಸಹ ಎಲ್.ಐ.ಸಿ. ಕಂಪನಿಯು ಪ್ರಮುಖವಾದ ಕಂಪನಿಯಾಗಿರುತ್ತದೆ.

**ಪ್ರಶ್ನೆ 22 : ಒಂದು ವೇಳೆ ಕ್ಲೇಮುಗಳ ವಿಚಾರದಲ್ಲಿ ಯಾವುದೇ ತಕರಾರುಗಳು ಇದ್ದಲ್ಲಿ ಅವುಗಳನ್ನು ಕಾನೂನಾತ್ಮಕವಾಗಿ ಭಾರತದಲ್ಲಿರುವ** ವಿಮಾಕಂಪನಿಗಳ ವಿರುದ್ಧ ಮುಂದುವರಿಯಲು **ಸಾಧ್ಯವೇ?**

ಯಾವುದೇ ವಿದೇಶಿ ವಿಮಾ ಕಂಪನಿಗಳು ನೇರವಾಗಿ ಭಾರತದಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ನಿಯಮಾವಳಿಗಳ ಪ್ರಕಾರ ಇತರೆ ಭಾರತೀಯ ಕಂಪನಿಗಳ ಜೊತೆಯಲ್ಲಿ ಶೇ.49% ರಷ್ಟು ಸಹಭಾಗಿತ್ವ ಹೊಂದಿವೆ. ಒಂದು ಅರ್ಥದಲ್ಲಿ ಇವುಗಳೂ ಭಾರತೀಯ ಕಂಪನಿಗಳು. ಈ ಎಲ್ಲಾ ಕಂಪನಿಗಳು ಭಾರತೀಯ ಕಾನೂನಿಗೆ ಒಳಪಟ್ಟಿರುತ್ತವೆ ಮತ್ತು ಕಾನೂನಿನ ಪ್ರಕಾರ ಮುಂದುವರೆಯಲು ಯಾವುದೇ ತೊಂದರೆ ಇರುವುದಿಲ್ಲ.

**ಪ್ರಶ್ನೆ 23 : ಮುಂದಿನ ದಿನಗಳಲ್ಲಿ ಪ್ರೀಮಿಯಂ ಅನ್ನು ಹೆಚ್ಚಿಸಬಹುದು ಅಥವಾ ಕಂಪನಿಗಳು ಈ ಯೋಜನೆಯನ್ನು ನಿಲ್ಲಿಸಬಹುದು.**

ಇನ್ಸೂರೆನ್ಸ್ ಸಹ ಬೇರೆ ಇತರೆ ಉತ್ಪನ್ನಗಳಂತೆ. ಈಗಾಗಲೇ 24 ಕಂಪನಿಗಳು ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವರುಗಳ ಮಧ್ಯದಲ್ಲಿ ಇರುವ ಪೈಪೋಟಿಯಿಂದ ಮೊತ್ತವು ಸ್ಥಿರವಾಗಿರಬಹುದು. ಆದರೆ ಮುಂದಿನ ದಿನಗಳಲ್ಲಿ ಪಿಎಂಜೆಜೆಬಿಐ ನ ವಿಮಾ ವ್ಯಾಪ್ತಿ ಮತ್ತು ಪ್ರೀಮಿಯಂ ಮೊತ್ತದ ವಿಚಾರದಲ್ಲಿ ಈ ಯೋಜನೆಯು ಚ ಲಾವಣೆಯಲ್ಲಿರುತ್ತದೆ ಮತ್ತು ಯೋಜನೆ ನಿಂತು ಹೋಗುವ ಪ್ರಮೇಯ ಬಹಳ ಕಡಿಮೆ. . ಒಂದು ವೇಳೆ ನಿರ್ದಿಷ್ಟ ಕಂಪನಿಯು ಯೋಜನೆಯನ್ನು ನಿಲ್ಲಿಸಿದಲ್ಲಿ, ಬ್ಯಾಂಕುಗಳು ಸಹಭಾಗಿತ್ವ ಹೊಂದಲು ಅನೇಕ ಅವಕಾಶಗಳಿವೆ .